# ಕರ್ನಾಟಕ ಸರ್ಕಾರ
# ಅರಣ್ಯ ಇಲಾಖೆ

## ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಆಯ್ಕೆ ಪ್ರಾಧಿಕಾರ, ಮಂಗಳೂರು ವೃತ್ತ, ಅರಣ್ಯ ಭವನ, ಅಳಪೆ, ಪಡೀಲ್, ಮಂಗಳೂರು – 575007.

**ಅಧಿಸೂಚನೆ ಸಂಖ್ಯೆ:ಎ4/ಸಿಬ್ಬಂದಿ/ ಅ.ವೀ.ನೇ.ನೇ./ವಿವ.31/2023-24 ದಿನಾಂಕ: 16.09.2023**

## ಪ್ರಕಟಣೆ

### 2023-24ನೇ ಸಾಲಿನಲ್ಲಿ 20 (ಇಪ್ಪತ್ತು) ಅರಣ್ಯ ವೀಕ್ಷಕ ಗ್ರೂಪ್ 'ಡಿ' ಹುದ್ದೆಗಳಿಗೆ ನೇರ ನೇಮಕಾತಿ

ಈ ಕಛೇರಿಯ ಅಧಿಸೂಚನೆ ಸಂಖ್ಯೆ:ಎ4/ಸಿಬ್ಬಂದಿ/ಅ.ವೀ.ನೇ.ನೇ./ವಿವ.31/2023-24 ದಿನಾಂಕ:16-9-2023 (20 ಅರಣ್ಯ ವೀಕ್ಷಕ 'ಡಿ' ಗ್ರೂಪ್ ಹುದ್ದೆಗಳಿಗೆ ನೇರ ನೇಮಕಾತಿ)ಗೆ ಸಂಬಂಧಿಸಿದಂತೆ, ಅಧಿಸೂಚನೆಯಲ್ಲಿ ಅಧಿಸೂಚಿಸಿದ ಹುದ್ದೆಗಳಿಗೆ ವೃಂದ ಮತ್ತು ನೇಮಕಾತಿ ನಿಯಮ ಹಾಗೂ ಅಧಿಸೂಚನೆಯಲ್ಲಿನ ಷರತ್ತುಗಳನ್ವಯ ದೈಹಿಕ ತಾಳ್ವಿಕೆ ಪರೀಕ್ಷೆ [Physical Endurance Test], ದೈಹಿಕ ಕಾರ್ಯ ಸಮರ್ಥತೆ ಪರೀಕ್ಷೆ [Physical Efficiency Test] ಹಾಗೂ ದೇಹ ದಾರ್ಢ್ಯತೆ ಪರೀಕ್ಷೆ [Physical Standard Test]ಗಳಿಗೆ ಮೆರಿಟ್ ಹಾಗೂ ನೇರ ಮತ್ತು ಸಮತಳ ಬಿಂದುಗಳ ಅನುಸಾರ ಅರ್ಹತೆ ಪಡೆದ ಅಭ್ಯರ್ಥಿಗಳ 1:20 (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಅರ್ಹತಾ ಪಟ್ಟಿಯನ್ನು ಇಲಾಖೆಯ ಅಂತರ್ಜಾಲ https://aranya.gov.in/ ದಲ್ಲಿ ನೇಮಕಾತಿ (Recruitment) ಶೀರ್ಷಿಕೆಯಡಿ ದಿನಾಂಕ:13-2-2024 ರಂದು ಪ್ರಕಟಿಸಿ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿತ್ತು. ಈ ಕುರಿತು ಸ್ವೀಕೃತವಾದ ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಿ, ತೆಗೆದುಕೊಂಡ ಕ್ರಮವನ್ನು ಹಾಗೂ ಅರ್ಹತೆ ಪಡೆದ ಅಭ್ಯರ್ಥಿಗಳ **1:20 (ಹುದ್ದೆ:ಅಭ್ಯರ್ಥಿ) ಅಂತಿಮ ತಾತ್ಕಾಲಿಕ ಅರ್ಹತಾ ಪಟ್ಟಿಯನ್ನು ಅನುಬಂಧ-2ರಲ್ಲಿ** ದಿನಾಂಕ:22-02-2024ರಂದು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿರುತ್ತದೆ.

ಮುಂದುವರಿಗೆಲು ದಿನಾಂಕ:22-02-2024ರಂದು ಪ್ರಕಟಿಸಿದ ಪ್ರಕಟಣೆಯ **ಅನುಬಂಧ-2ರಲ್ಲಿರುವ** ಅಭ್ಯರ್ಥಿಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳು ಹಾಗೂ ಅಧಿಸೂಚನೆಯಲ್ಲಿನ ಷರತ್ತುಗಳಂತೆ ದೈಹಿಕ ತಾಳ್ವಿಕೆ ಪರೀಕ್ಷೆ [Physical Endurance Test], ದೈಹಿಕ ಕಾರ್ಯ ಸಮರ್ಥತೆ ಪರೀಕ್ಷೆ [Physical Efficiency Test], ಮೂಲದಾಖಲೆಗಳ ಪರಿಶೀಲನೆ ಹಾಗೂ ದೇಹ ದಾರ್ಢ್ಯತೆ ಪರೀಕ್ಷೆ [Physical Standard Test]ಗಳನ್ನು ದಿನಾಂಕ:29-02-2024 ರಿಂದ 04-03-2024ರ ವರೆಗೆ ನಡೆಸಬೇಕಾಗಿರುತ್ತದೆ.

ಅದರಂತೆ, **ಅನುಬಂಧ-2ರಲ್ಲಿರುವ** ಅರ್ಹ ಅಭ್ಯರ್ಥಿಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳು ಹಾಗೂ ಅಧಿಸೂಚನೆಯಲ್ಲಿನ ಷರತ್ತುಗಳಂತೆ ದೈಹಿಕ ತಾಳ್ವಿಕೆ ಪರೀಕ್ಷೆ [Physical Endurance Test], ದೈಹಿಕ ಕಾರ್ಯ ಸಮರ್ಥತೆ ಪರೀಕ್ಷೆ [Physical Efficiency Test], ಮೂಲದಾಖಲೆಗಳ ಪರಿಶೀಲನೆ ಹಾಗೂ ದೇಹ ದಾರ್ಢ್ಯತೆ ಪರೀಕ್ಷೆ [Physical Standard Test]ಗಳನ್ನು **ಈ ಕೆಳಕಂಡ ದಿನಾಂಕಗಳಂದು ನಡೆಸಲಾಗುವುದು.**

| ಕ್ರ.ಸಂ | ನೇರ ನೇಮಕಾತಿಯ ಹುದ್ದೆ | ದಿನಾಂಕ | ಪರೀಕ್ಷೆಯ ವಿವರ ಮತ್ತು ಸಮಯ | ಅಭ್ಯರ್ಥಿಗಳಿಗೆ ಪರೀಕ್ಷಾ ಪ್ರಕ್ರಿಯೆಗಳು ನಡೆಯುವ ಸ್ಥಳ |
|---|---|---|---|---|
| 1 | ಅರಣ್ಯ ವೀಕ್ಷಕ | 29-02-2024 | ದೈಹಿಕ ತಾಳ್ವಿಕೆ ಪರೀಕ್ಷೆ ಮತ್ತು ದೈಹಿಕ ಕಾರ್ಯ ಸಮರ್ಥತೆ ಪರೀಕ್ಷೆ **ಬೆಳಿಗ್ಗೆ – 6.00 ಗಂಟೆ** | ಸಂತ ಅಲೋಶಿಯಸ್ ಕಾಲೇಜು, ಸಂತ ಅಲೋಶಿಯಸ್ ಸೆಂಟಿನರಿ ಗ್ರೌಂಡ್, ಹಂಪನಕಟ್ಟ, ಮಂಗಳೂರು - 575003. |
| 2 | ಅರಣ್ಯ ವೀಕ್ಷಕ | 01-03-2024 ರಿಂದ 04-03-2024ರ ವರೆಗೆ | ವೈದ್ಯಕೀಯ ಪರೀಕ್ಷೆ ಮತ್ತು ಮೂಲ ದಾಖಲಾತಿಗಳ ಪರಿಶೀಲನೆ **ಬೆಳಿಗ್ಗೆ – 8.00 ಗಂಟೆ** | ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ. ಮಂಗಳೂರು. **(ಹಾಜರಾಗಬೇಕಾದ ಸ್ಥಳ: ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಮಂಗಳೂರು ವಿಭಾಗ, ನೆಹರೂ ಮೈದಾನದ ಎದುರು, ಆರ್.ಟಿ.ಓ. ಕಛೇರಿ ಹತ್ತಿರ, ಹಂಪನಕಟ್ಟ ಮಂಗಳೂರು)** |

ಈ ಮೇಲೆ ನಿಗದಿಪಡಿಸಿದ ಸ್ಥಳ, ದಿನಾಂಕ ಮತ್ತು ಸಮಯಕ್ಕೆ ಸರಿಯಾಗಿ **ಅನುಬಂಧ-2ರಲ್ಲಿರುವ** ಅರ್ಹ ಅಭ್ಯರ್ಥಿಗಳು ದೈಹಿಕ ತಾಳ್ವಿಕೆ ಪರೀಕ್ಷೆ ಮತ್ತು ದೈಹಿಕ ಕಾರ್ಯ ಸಮರ್ಥತೆ ಪರೀಕ್ಷೆಗಳಿಗೆ ಹಾಜರಾಗುವುದು. ಮೂಲ ದಾಖಲಾತಿಗಳ ಪರಿಶೀಲನೆ ಸಂದರ್ಭದಲ್ಲಿ **(i)ಇತ್ತೀಚಿನ ನಾಲ್ಕು(4) ಭಾವಚಿತ್ರಗಳು (ಪಾಸ್‌ಪೋರ್ಟ್ ಸೈಜ್:,(ii) ಮೂಲ ದಾಖಲೆ / ಪ್ರಮಾಣ ಪತ್ರಗಳು, ಹಾಗೂ (iii) ಮೂಲ ದಾಖಲೆ / ಪ್ರಮಾಣ ಪತ್ರಗಳ ಒಂದು ಜೆರಾಕ್ಸ್ (ಗೆಜೆಟೆಡ್ ಅಧಿಕಾರಿಯಿಂದ ದೃಢೀಕರಿಸಿದ) ಪ್ರತಿಯನ್ನು ಹಾಜರುಪಡಿಸುವುದು.** ಈ ಪ್ರಕ್ರಿಯೆಯು 1 ರಿಂದ 4 ದಿನಗಳು ನಡೆಯುವ ಸಾಧ್ಯತೆ ಇರುವುದರಿಂದ ಈ ಕುರಿತು ಪೂರ್ವ ಸಿದ್ಧತೆಗಳನ್ನು ಅಭ್ಯರ್ಥಿಗಳೇ ಮಾಡಿಕೊಂಡು ಸ್ವಂತ ಖರ್ಚಿನಲ್ಲಿ ಸದರಿ ಪರೀಕ್ಷೆಗಳಿಗೆ ಹಾಜರಾಗುವುದು.

**ಸೂಚನೆ:**

1) ನಿಗದಿತ ದಿನಾಂಕ ಮತ್ತು ಸಮಯದಂದು ಮೂಲ ದಾಖಲೆ/ಪ್ರಮಾಣ ಪತ್ರಗಳನ್ನು ಇಲಾಖಾ ವಶ ಸಲ್ಲಿಸದೇ ಇದ್ದಲ್ಲಿ ಹಾಗೂ ನಿಗದಿತ ದೇಹದಾರ್ಢ್ಯತೆ ಪರೀಕ್ಷೆಗೆ ಹಾಜರಾಗದೇ ಇದ್ದಲ್ಲಿ ಅಭ್ಯರ್ಥಿಯ ಅಭ್ಯರ್ಥಿತ್ವ ಸ್ವಯಂ ಚಾಲಿತವಾಗಿ ರದ್ದಾಗುತ್ತದೆ. ಈ ಕುರಿತು ಯಾವುದೇ ರೀತಿಯ ಪತ್ರ ವ್ಯವಹಾರವನ್ನು ಮಾಡಲಾಗುವುದಿಲ್ಲ.
2) ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯಲ್ಲಿ ದಾಖಲಿಸಿರುವ ಮಾಹಿತಿಯ ಆಧಾರದ ಮೇಲೆ ಮೂಲ ದಾಖಲೆ / ಪ್ರಮಾಣ ಪತ್ರಗಳ ನೈಜತೆ ಹಾಗೂ ದೇಹ ದಾರ್ಢ್ಯತೆ ಪರೀಕ್ಷೆಗಳ ಫಲಿತಾಂಶದ ಷರತ್ತಿಗೆ ಒಳಪಟ್ಟಿರುತ್ತದೆ. ಯಾವುದೇ ಹಂತದಲ್ಲಿ ಅಭ್ಯರ್ಥಿಯ ಅನರ್ಹತೆ ಖಚಿತವಾದಲ್ಲಿ ಅಭ್ಯರ್ಥಿಯ ಆಯ್ಕೆಯನ್ನು ರದ್ದುಪಡಿಸುವ ಅಧಿಕಾರವನ್ನು ಅರಣ್ಯ ಇಲಾಖೆಯು ಹೊಂದಿರುತ್ತದೆ.
3) ಅರಣ್ಯ ಇಲಾಖೆಯ ಅಧಿಕೃತ ವೆಬ್‌ಸೈಟ್ **https://aranya.gov.in/** ದಲ್ಲಿ **ನೇಮಕಾತಿ (Recruitment)** ಶೀರ್ಷಿಕೆಯಡಿ ಪ್ರಕಟಿಸಲಾಗುತ್ತಿರುವ ಮಾಹಿತಿಯನ್ನು ಅಭ್ಯರ್ಥಿಗಳು ಕಾಲ ಕಾಲಕ್ಕೆ ವೀಕ್ಷಿಸುವುದು. ಇದಕ್ಕಾಗಿ ಬೇರೆ ಯಾವುದೇ ಪತ್ರ ವ್ಯವಹಾರ / ದೂರವಾಣಿ / ಇಮೇಲ್/ ಎಸ್.ಎಂ.ಎಸ್. ಇಲಾಖೆ ವತಿಯಿಂದ ಮಾಡಲಾಗುವುದಿಲ್ಲ / ನೀಡಲಾಗುವುದಿಲ್ಲ.
4) **ಅಭ್ಯರ್ಥಿಗಳು ನಿಗದಿತ ಪರೀಕ್ಷೆಗಳಿಗೆ ಹಾಜರಾಗುವಾಗ ಈ ಕೆಳಕಂಡ ಯಾವುದಾದರೂ ಒಂದು ಗುರುತಿನ ಚೀಟಿಯನ್ನು ಕಡ್ಡಾಯವಾಗ ಹಾಜರುಪಡಿಸತಕ್ಕದ್ದು.**

(i) ಆಧಾರ್ ಕಾರ್ಡ್ (Aadhar Card)
(ii) ಪಾಸ್‌ಪೋರ್ಟ್ (Passport)
(iii) ಚಾಲನಾ ಪರವಾನಗಿ ಪತ್ರ (Driving License)
(iv) ಪ್ಯಾನ್ ಕಾರ್ಡ್ (PAN Card)
(v) ರಾಜ್ಯ ಸರ್ಕಾರ/ ಕೇಂದ್ರ ಸರ್ಕಾರ/ ಸಾರ್ವಜನಿಕ ಸ್ವಾಮ್ಯದ ಅಥವಾ ಸರ್ಕಾರದ ಅಧೀನಕ್ಕೆ ಒಳಪಟ್ಟ ಖಾಸಗಿ ಕಂಪನಿಗಳು ವಿತರಿಸಿರುವ ಭಾವಚಿತ್ರವಿರುವ ಸೇವಾ ಗುರುತಿನ ಚೀಟಿ (Service ID Card)
(vi) ಸಾರ್ವಜನಿಕ ಬ್ಯಾಂಕ್‌ಗಳು/ ಅಂಚೆ ಕಛೇರಿಗಳು ವಿತರಿಸಿರುವ ಭಾವಚಿತ್ರ ಪಾಸ್‌ಪುಸ್ತಕ (Bank Pass Book with photograph)
(vii) ಭಾವಚಿತ್ರ ಸಮೇತ ನೋಂದಣಿಯಾಗಿರುವ ಸ್ವತ್ತಿನ ದಾಖಲಾತಿ ಪತ್ರ ಅಥವಾ ಪಟ್ಟಾ ಪುಸ್ತಕ (Pattas and registered deeds with photograph)
(viii) ಭಾವಚಿತ್ರ ಸಮೇತ ಸಂಬಂಧಪಟ್ಟ ಪ್ರಾಧಿಕಾರಿಯವರು ವಿತರಿಸಿರುವ ಜಾತಿ ಪ್ರಮಾಣ ಪತ್ರ (Community certificate with photograph)
(ix) ಮಾಜಿ ಸೈನಿಕ ಅಭ್ಯರ್ಥಿಗಳಿಗೆ ವಿತರಿಸಿರುವ ಪಿಂಚಣಿ ಪುಸ್ತಕ/ ಪಿಂಚಣಿ ಮಂಜೂರಾತಿ ಆಗಿರುವ ಆದೇಶ (Ex-servicemen's pension book/ pension payment order)
(x) ಎನ್.ಆರ್.ಇ.ಜಿ.ಎಸ್. ಇಂದ ನೀಡಿದ ಭಾವಚಿತ್ರವಿರುವ ಉದ್ಯೋಗ ಚೀಟಿ (NREGS – Job card with photograph)
(xi) ಎಲೆಕ್ಟೋರಲ್ ಫೋಟೋ ಗುರುತಿನ ಚೀಟಿ (EPIC)

ಅರಣ್ಯ ಸಂರಕ್ಷಣಾಧಿಕಾರಿ ಹಾಗೂ
ಆಯ್ಕೆ ಪ್ರಾಧಿಕಾರ
ಮಂಗಳೂರು ವೃತ್ತ, ಮಂಗಳೂರು

ದಿನಾಂಕ:26-02-2024